**ದಿನಾಂಕಃ 19.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಕೆ.ಬಿ.ಜೆ. ವಕೀಲರಿಂದಃ**

ನನ್ನ ತಂದೆಯು 2002 ರಲ್ಲಿ ಹಾಗೂ ನನ್ನ ತಾಯಿಯು 2021 ರಲ್ಲಿ ಮೃತಪಟ್ಟಿರುತ್ತಾರೆ ಅಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ಕುಟುಂಬದ ವ್ಯವಸ್ಥಾಪಕಳು ನಾನೇ ಆಗಿರುತ್ತೇನೆ. ಈ ಪ್ರಕರಣದ 1 ನೇ ಪ್ರತಿವಾದಿ ನಮ್ಮ ಕುಟುಂಬದಲ್ಲಿ ಹಿರಿಯವ ಅಂದರೆ ಸರಿ. ನಮ್ಮೆಲ್ಲರ ಮದುವೆಯು ನನ್ನ ತಂದೆ ತೀರಿಕೊಂಡ ನಂತರ ಆಗಿರುತ್ತದೆ. ನನ್ನ ತಂದೆಯ ಜೀವಿತಾವಧಿಯಲ್ಲಿ ಜಮೀನಿನಲ್ಲಿ ಯಾವುದೇ ಕೊಳವೆ ಬಾವಿ, ತೋಟ ಇರಲಿಲ್ಲ ಅಂದರೆ ಸರಿ. ದಾವಾ ಆಸ್ತಿ ನಂ.1 ರಲ್ಲಿ ಈಗ ಕೊಳವೆ ಬಾವಿ, ತೋಟ ಇದೆ ಅಂದರೆ ಸರಿ. ಅದೇ ರೀತಿ ದಾವಾ ಆಸ್ತಿ ನಂ.2 ರಲ್ಲಿ ಕೊಳವೆ ಬಾವಿ ಇದೆ ಅಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ, ಮುಂದುವರೆದು ನಾವು ಮಾಡುವ ಜಮೀನಿನಲ್ಲಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಅದೇ ರೀತಿ ದಾವಾ ಆಸ್ತಿ ನಂ.3 ರಲ್ಲಿ ತೋಟ ಮತ್ತು ಕೊಳವೆ ಬಾವಿ ವ್ಯವಸ್ಥೆ ಇದೆ ಅಂದರೆ ಇಲ್ಲ. ದಾವಾ ಆಸ್ತಿ ನಂ.4 ಮನೆ ಅದು ಸರ್ವೆ ನಂಬರ್ ನಲ್ಲಿರುತ್ತದೆ ಅಂದರೆ ನನಗೆ ಮಾಹಿತಿ ಇಲ್ಲ. ನಾನು ದಾವೆಯಲ್ಲಿ ದಾವಾ ಆಸ್ತಿಗಳು ತಂದೆ ಮತ್ತು ಅವರ ಸಹೋದರರ ನಡುವೆ ಆದಂತಹ ಜುಬಾನಿ ಹಿಸ್ಸೆ ಪತ್ರದಂತೆ ಪ್ರಾಪ್ತವಾಗಿರುತ್ತವೆ ಎಂದು ತೋರಿಸಲು ದಾಖಲೆ ಇದೆಯಾ ಅಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಹತ್ತಿರ ಇದೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳು ನನ್ನ ತಂದೆ

ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತವೆ ಅಂದರೆ ಸರಿ. ದಾವಾ ಆಸ್ತಿ ನಂ.4 ಈಗಲೂ ಸಹ ನನ್ನ ತಂದೆಯ ಹೆಸರಿನಲ್ಲಿದೆ ಅಂದರೆ ಸರಿ. ದಾವಾ ಆಸ್ತಿ ನಂ.2 ಮತ್ತು 3 ರ ಪಹಣಿ ಪತ್ರಿಕೆಗಳಲ್ಲಿ ಬೇರೆಯವರ ಹೆಸರು ಇದೆ ಅಂದರೆ ಸರಿ. ನನ್ನ ತಂದೆ ತೀರಿಕೊಳ್ಳುವ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಮದುವೆ ಮಾಡುವುದು ಕಷ್ಟಕರವಾಗಿತ್ತು ಅಂದರೆ ಸರಿ. 1 ನೇ ಪ್ರತಿವಾದಿಯು ನನಗೆ ಮತ್ತು 2 ರಿಂದ 4 ನೇ ಪ್ರತಿವಾದಿಯವರ ಮದುವೆ ಮಾಡಿಸಿರುತ್ತಾರೆ ಅಂದರೆ ಸುಳ್ಳು.

2. ನನ್ನ ತಂದೆ ತೀರಿಕೊಂಡ ನಂತರ 1 ನೇ ಪ್ರತಿವಾದಿಯು ಖಾತೆ ಪಹಣಿ ಬದಲಾವಣೆ ಮಾಡಿಕೊಳ್ಳುವಂತೆ ನಮ್ಮ ಬಳಿ ಸಹಿ ಕೇಳಿದ್ದರು ಅಂದರೆ ಇಲ್ಲ. ನಮ್ಮ ತಂದೆಯ ಸಹೋದರರು ಹಿರಿಯರಾಗಿದ್ದು, ಅವರ ಮಧ್ಯೆ ಜುಬಾನಿ ಹಿಸ್ಸೆ ಪತ್ರ ಆಗಿರುತ್ತದೆ ಅಂದರೆ ಸರಿ. ನಂತರ 1 ನೇ ಪ್ರತಿವಾದಿ ನಮಗೆ ಸಾಕಷ್ಟು ಒಡವೆಗಳನ್ನು ಮಾಡಿಸಿ ಮದುವೆ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ವ್ಯವಸಾಯದೊಂದಿಗೆ ಫೋಟೋಗ್ರಾಫ್ ವೃತ್ತಿ ಮಾಡುತ್ತಾನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಆತನಿಗೆ ಯಾವುದೇ ಆದಾಯ ಇರಲಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತುಗಳಲ್ಲಿ ಸ್ವಂತ ಖರ್ಚಿನಿಂದ ಕೊಳವೆ ಬಾವಿ ತೆಗೆಸಿರುತ್ತಾರೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನಗೆ ಹಾಗೂ 2 ರಿಂದ 4 ನೇ ಪ್ರತಿವಾದಿಯವರಿಗೆ ಖರ್ಚು ಮಾಡಿ, ಒಡವೆ ಬಂಗಾರವನ್ನು ನೀಡಿ ಮದುವೆ ಮಾಡಿಕೊಟ್ಟಿರುವುದರಿಂದ ದಾವಾ ಆಸ್ತಿಯಲ್ಲಿ ಹಿಸ್ಸೆ

ಇಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು). ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**